# ಸಿಂಧು @500

ಪ್ರತಿ ಗೆಲುವೂ ಮತ್ತೊಂದು ಗೆಲುವಿಗೆ ಪ್ರೇರಣೆ, ಒಂದು ಸೋಲಿನ ಪಾಠ ಮುಂದಿನ ಗೆಲುವಿಗೆ ಮೆಟ್ಟಿಲು ಎನ್ನುವುದನ್ನು ಪಾಲಿಸಿಕೊಂಡು ಬಂದಿರುವ ಮುತ್ತಿನನಗರಿ ಹೈದರಾಬಾದ್‌ನ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು, ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ 500 ಪಂದ್ಯಗಳ ಗೆಲುವಿನ ವಿಶೇಷ ದಾಖಲೆಯ 'ಮುತ್ತುಗಳ ಹಾರ' ಜೋಡಿಸಿದ್ದಾರೆ.



■ ಪ್ರಮೋದ ಕುಲಕರ್ಣಿ

ಒಂದೂವರೆ ದಶಕದ ಹಿಂದೆ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಕ್ಷಿತಿಜದಲ್ಲಿ ಭಾರತದ ಸಾಧನೆ ಅಷ್ಟಕ್ಕಷ್ಟೇ ಇತ್ತು. ಒಲಿಂಪಿಕ್ಸ್‌ನಂಥ ಕ್ರೀಡಾಕೂಟದ ದೊಡ್ಡ ವೇದಿಕೆಯ ಬ್ಯಾಡ್ಮಿಂಟನ್‌ನಲ್ಲಿ ಭಾರತ ಪದಕವನ್ನೇ ಗೆದ್ದಿರಲಿಲ್ಲ. ಅನೇಕ ದಿಗ್ಗಜರು ಬಂದು ಹೋಗಿದ್ದರೂ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಲು ಸಾಧ್ಯವಾಗಿರಲಿಲ್ಲ. ಸಿಂಧು ಸ್ನೇಹಿತೆಯೂ ಆದ ಸೈನಾ ನೆಹ್ವಾಲ್ 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಜಯಿಸಿದ ಕಂಚು ಐತಿಹಾಸಿಕ ಸಾಧನೆಯಾಗಿತ್ತು. ಆಗ ಬ್ಯಾಡ್ಮಿಂಟನ್‌ನಲ್ಲಿ ಪಾರುಪತ್ಯ ಹೊಂದಿದ್ದ ಚೀನಾ, ಸಿಂಗಪುರ, ಮಲೇಷ್ಯಾ, ಡೆನ್ಮಾರ್ಕ್‌ನಂಥ ಬಲಿಷ್ಠ ರಾಷ್ಟ್ರಗಳ ಕ್ರೀಡಾಪಟುಗಳನ್ನು ಅಂಕಣದಲ್ಲಿ ಹಣೆದು ಸೈನಾ ನೆಹ್ವಾಲ್ ಹಾಗೂ ಸಿಂಧು ನವಯುಗದ ಬ್ಯಾಡ್ಮಿಂಟನ್ ತಾರೆಯರಾಗಿ ಹೊರಹೊಮ್ಮಿದ್ದರು. ಇತ್ತೀಚೆಗೆ ಸೈನಾ ನೆಹ್ವಾಲ್ ಕ್ರೀಡಾಬದುಕಿಗೆ ನಿವೃತ್ತಿ ಘೋಷಿಸಿ ಹೊರನಡೆದರೆ, ಅವರ ಸ್ನೇಹಿತೆ ಸಿಂಧು ವಿಶೇಷ ದಾಖಲೆ ಬರೆದಿದ್ದಾರೆ.

ಜಕಾರ್ತದಲ್ಲಿ ನಡೆದ ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸಿಂಧು ಡೆನ್ಮಾರ್ಕ್‌ನ ಲಿನ್ ಹೊಯ್ಮಾರ್ಕ್ ಜೇರ್‌ಫೆಲ್ಟ್ ಎದುರು ಗೆಲುವು ಪಡೆಯುವ ಮೂಲಕ ವೃತ್ತಿಬದುಕಿನ 500ನೇ ಪಂದ್ಯದ ಗೆಲುವು ತಮ್ಮದಾಗಿಸಿಕೊಂಡರು. ವಿಶ್ವದಲ್ಲಿ ಇಂಥ ಸಾಧನೆ ಮಾಡಿದ ಸಿಂಗಲ್ಸ್ ಆಟಗಾರ್ತಿಯರಲ್ಲಿ ಸಿಂಧು ಆರನೆಯವರಾದರು. ಭಾರತದ ಮೊದಲ ಆಟಗಾರ್ತಿ ಎನ್ನುವ ಹೆಗ್ಗಳಿಕೆಯನ್ನು ತಮ್ಮದಾಗಿಸಿಕೊಂಡರು.

ರಾಷ್ಟ್ರೀಯ ಮಟ್ಟದ ವಾಲಿಬಾಲ್ ಕ್ರೀಡಾಪಟುಗಳಾಗಿದ್ದ ಪಿ.ವಿ. ರಮಣ ಹಾಗೂ ಪಿ. ವಿಜಯಾ ದಂಪತಿಯ ಪುತ್ರಿ ಸಿಂಧುಗೆ ಮನೆಯಲ್ಲಿಯೇ ಕ್ರೀಡಾ ವಾತಾವರಣವಿತ್ತು. ರಮಣ ಅವರು 1986ರ ಸೋಲ್‌ನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದ ಭಾರತೀಯ ತಂಡದ ಸದಸ್ಯರಾಗಿದ್ದರು. ಈ ಸಾಧನೆಗಾಗಿ 2000ರಲ್ಲಿ ಅರ್ಜುನ ಪ್ರಶಸ್ತಿಯನ್ನೂ ಪಡೆದುಕೊಂಡಿದ್ದರು.

ಪೋಷಕರು ವಾಲಿಬಾಲ್ ಕ್ರೀಡಾಪಟುಗಳಾಗಿದ್ದರೂ ಮಗಳು ಸಿಂಧುವನ್ನು ಬ್ಯಾಡ್ಮಿಂಟನ್ ಆಟಗಾರ್ತಿಯನ್ನಾಗಿಸಲು ಪಣ ತೊಟ್ಟರು. ಸಿಂಧು ಬಾಲ್ಯದಲ್ಲಿ ಈ ಕ್ರೀಡೆಯತ್ತ ಆಸಕ್ತಿ ಬೆಳೆಸಿಕೊಂಡಾಗ ಪುಲ್ಲೇಲ ಗೋಪಿಚಂದ್ 2001ರ ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದರು. ಅವರ ಆಟದ ಶೈಲಿ, ವಿಶ್ವಮಟ್ಟದಲ್ಲಿ ಪಡೆದ ಕೀರ್ತಿ, ಯಶಸ್ಸು ಎಲ್ಲ ಭಾರತೀಯರು ಹೆಮ್ಮೆಪಡುವಂತಾಗಿತ್ತು.

ಗೋಪಿಚಂದ್ ಪ್ರಭಾವ ಹಾಗೂ ಪೋಷಕರ ಪ್ರೋತ್ಸಾಹದಿಂದ ಸಿಕಂದರಬಾದ್‌ನಲ್ಲಿರುವ ಇಂಡಿಯನ್ ರೈಲ್ವೆ ಇನ್‌ಸ್ಟಿಟ್ಯೂಟ್‌ನಲ್ಲಿ ಸಿಂಧು ಬ್ಯಾಡ್ಮಿಂಟನ್ ಕ್ರೀಡೆಗೆ ಸಂಬಂಧಿಸಿದ ಮೂಲ ಕೌಶಲಗಳನ್ನು ಕಲಿತುಕೊಂಡರು. ಬಳಿಕ ಕ್ರೀಡಾಬದುಕಿಗೆ ಪ್ರೇರಣೆಯಾದ ಪುಲ್ಲೇಲ ಗೋಪಿಚಂದ್ ಅವರ ಬ್ಯಾಡ್ಮಿಂಟನ್ ಅಕಾಡೆಮಿ ಸೇರಿಕೊಂಡರು. ತಾವಿದ್ದ ಮನೆಯಿಂದ ನಿತ್ಯ 56 ಕಿ.ಮೀ. ಓಡಾಡಿ ಅಕಾಡೆಮಿಯಲ್ಲಿ ಅಭ್ಯಾಸ ಮಾಡಿದರು.

'ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು' ಎನ್ನುವಂತೆ ಸಿಂಧು, ಅಕಾಡೆಮಿಗೆ ಸೇರಿದ ಒಂದೆರಡು ವರ್ಷಗಳಲ್ಲಿ ಆಟದ ಕೌಶಲಗಳನ್ನು ತೋರಿಸಿ 10 ವರ್ಷದೊಳಗಿನವರ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದರು. ಸರ್ವೊ ಆಲ್ ಇಂಡಿಯಾ ರ್‍ಯಾಂಕಿಂಗ್ ಚಾಂಪಿಯನ್‌ಷಿಪ್‌ನ ಡಬಲ್ಸ್ ವಿಭಾಗದಲ್ಲಿ ಟ್ರೋಫಿ ತಮ್ಮದಾಗಿಸಿಕೊಂಡರು.